# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570 006.

ಸಂಖ್ಯೆ : ಕರಾಮುವಿ/ಅಸಾವಿ/07-08/·2019-20 ದಿನಾಂಕ: 16-09-2020

## ದರಪಟ್ಟಿ ಕೋರಿ

**ವಿಷಯ:** 2020-21 ನೇ ಸಾಲಿನ ಪ್ರವೇಶಾತಿ ಪ್ರಚಾರದ ಪೋಸ್ಟರ್ (ಕನ್ನಡ ಮಾಧ್ಯಮ) ಗಳನ್ನು ಮುದ್ರಿಸಿ ಸರಬರಾಜು ಮಾಡುವ ಸಂಬಂಧ ದರಪಟ್ಟಿ ಕೋರಿ

**ಉಲ್ಲೇಖ:** ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 14-09-2020. (ಕಂಡಿಕೆ-52)

*******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2020-21 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಸದರಿ ಪ್ರವೇಶಾತಿಯ ಪ್ರಚಾರ ಸಂಬಂಧದ ಮಾಹಿತಿ ಒಳಗೊಂಡ ಪೋಸ್ಟರ್‌ಗಳನ್ನು ಕನ್ನಡ ಮಾಧ್ಯಮದಲ್ಲಿ ಮುದ್ರಿಸಿ ಸರಬರಾಜು ಮಾಡಿಕೊಳ್ಳಬೇಕಾಗಿದ್ದು, ಮುದ್ರಣವಾಗಬೇಕಾಗಿರುವ ಪೋಸ್ಟರ್‌ಗೆ ಬಳಸಬೇಕಾದ ಕಾಗದದ Specification ಈ ಕೆಳಕಂಡಂತೆ ತಿಳಿಸಲಾಗಿದೆ. ಸದರಿ ಪೋಸ್ಟರ್‌ಗಳನ್ನು ಮುದ್ರಿಸಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಯದ ಕೇಂದ್ರ ಕಚೇರಿ ಹಾಗು ವಿವಿಧ ಪ್ರಾದೇಶಿಕ ಕೇಂದ್ರಗಳಿಗೆ ಸರಬರಾಜು ಮಾಡಲು ತಗಲುವ ಕನಿಷ್ಠತಮ ದರವನ್ನು (ಎಲ್ಲಾ ತೆರಿಗೆಗಳು ಸೇರಿದಂತೆ) ದರಪಟ್ಟಿ ನೀಡಲು ಕೋರಲಾಗಿದೆ.

**ಮುದ್ರಣವಾಗಬೇಕಾದ ಪೋಸ್ಟರ್‌ಗಳ ವಿವರ :-**

1. 2020-21 ನೇ ಸಾಲಿನ ಪ್ರವೇಶಾತಿಯ ಪ್ರಚಾರದ ಮಾಹಿತಿ ಒಳಗೊಂಡ ಪೋಸ್ಟರ್‌ಗಳನ್ನು (ಕನ್ನಡ ಮಾಧ್ಯಮ) 15x20 ರ ಅಳತೆಯಲ್ಲಿ ಮುದ್ರಿಸಬೇಕಾಗಿರುತ್ತದೆ.
2. ಮುದ್ರಣಕ್ಕೆ ಉತ್ತಮ ಕಂಪನಿಯ 130 GSM Art Paper ಬಳಸಿ ಹಿಂಬದಿಯಲ್ಲಿ ಪೋಸ್ಟರ್ ಅಂಟಿಸಲು ಅನುಕೂಲವಾಗುವ ರೀತಿಯಲ್ಲಿ ಮೂರು ಹಂತದಲ್ಲಿ ಸ್ಟಿಕ್ಕರ್‌ನೊಂದಿಗೆ ಬಹುವರ್ಣದಲ್ಲಿ ಮುದ್ರಿಸಬೇಕು.
3. ಪೋಸ್ಟರ್‌ಗಳ ಮುದ್ರಣಕ್ಕೆ ಸಂಬಂಧಿಸಿದ ವಿಷಯವನ್ನು ವಿಶ್ವವಿದ್ಯಾನಿಲಯವೇ ಒದಗಿಸುತ್ತದೆ.
4. ಈ ಮೇಲ್ಕಂಡ Specification ರೀತ್ಯಾ 2020-21 ನೇ ಸಾಲಿನ ಪ್ರವೇಶಾತಿ ಪ್ರಚಾರದ ಸಂಬಂಧ ಪೋಸ್ಟರ್‌ಗಳನ್ನು ಕನ್ನಡ ಮಾಧ್ಯಮದ 16,000 ಪ್ರತಿಗಳನ್ನು ಮುದ್ರಿಸಿ ಕೇಂದ್ರ ಸ್ಥಾನಕ್ಕೆ ಸರಬರಾಜು ಮಾಡಬೇಕಾಗುತ್ತದೆ. ಈ ರೀತಿಯಲ್ಲಿ ಒಟ್ಟಾರೆ 16,000 ಪೋಸ್ಟರ್‌ಗಳನ್ನು ಮುದ್ರಿಸಿ ಸರಬರಾಜು ಮಾಡಲು ಒಂದು ಪೋಸ್ಟರ್‌ಗೆ ತಗುಲುವ ಕನಿಷ್ಠತಮ ದರವನ್ನು (ಎಲ್ಲಾ ತೆರಿಗೆಗಳು ಸೇರಿದಂತೆ) ಸಲ್ಲಿಸಲು ಕೋರಿದೆ.

**ನಿಯಮ ಮತ್ತು ಷರತ್ತುಗಳು :-**

1. ಪೋಸ್ಟರ್‌ಗಳ ಮುದ್ರಣದ ವಿಷಯವುಳ್ಳ ಸಿ.ಡಿ ಮತ್ತು ಡೆಮಿಯನ್ನು ಮುದ್ರಣದ ಕಾರ್ಯಾದೇಶದೊಂದಿಗೆ ವಿ.ವಿ. ನಿಲಯವೇ ನೀಡುತ್ತದೆ. ಯಾವುದೇ ಬದಲಾವಣೆ ಇಲ್ಲದಂತೆ ಅಚ್ಚುಕಟ್ಟಾಗಿ ಮುದ್ರಿಸಿ ಸರಬರಾಜು ಮಾಡಬೇಕಾಗುತ್ತದೆ.



Scanned with CamScanner

2. ಸದರಿ ಪೋಸ್ಟರ್‌ಗಳನ್ನು ವಿ.ವಿ ನಿಲಯ ಸೂಚಿಸಿದ Specification ರೀತ್ಯಾ ಸಿದ್ಧಪಡಿಸಿ ನಿಗಧಿತ ದಿನಾಂಕದೊಳಗೆ ಸರಬರಾಜು ಮಾಡಲು ಸಿದ್ಧರಿರಬೇಕು.

3. ಸದರಿ ದರಪಟ್ಟಿಯು ಕಾರ್ಯದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಚಾಲ್ತಿಯಲ್ಲಿ ಇರುತ್ತದೆ.

4. ಒಮ್ಮೆ ದರಪಟ್ಟಿ ಸಲ್ಲಿಸಿ ಕನಿಷ್ಠತಮ ದರ ನಿಗಧಿಯಾದ ನಂತರ ಸಿದ್ಧಪಡಿಸಲು ಕಾರಣ ನೀಡಿದರೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತದೆ.

5. ವಿ.ವಿ.ಯಲ್ಲಿ **GST** ನೊಂದಣಿದಾರರಿಗೆ ಮಾತ್ರ ಮುದ್ರಣ ಕೆಲಸ ನಿರ್ವಹಿಸಲು ಅವಕಾಶವಿದ್ದು **GST** ನೊಂದಣಿದಾರರು ಮಾತ್ರ ದರಪಟ್ಟಿಯನ್ನು ಸಲ್ಲಿಸುವುದು. ತಪ್ಪಿದ್ದಲ್ಲಿ ದರಪಟ್ಟಿಯನ್ನು ತಿರಸ್ಕರಿಸಲಾಗುವುದು.

6. ಸದರಿ ದರಪಟ್ಟಿಯನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ವಿ.ವಿ.ಯು ಹೊಂದಿರುತ್ತದೆ.

7. ದರಪಟ್ಟಿಯನ್ನು ಮೊಹರಾದ ಲಕೋಟೆಯಲ್ಲಿಟ್ಟು **"2020-2021 ನೇ ಸಾಲಿನ ಪ್ರವೇಶಾತಿಯ ಪ್ರಚಾರದ ಮಾಹಿತಿ ಒಳಗೊಂಡ ಪೋಸ್ಟರ್** (ಕನ್ನಡ ಮಾಧ್ಯಮ) **ಮುದ್ರಣ ಸಂಬಂಧದ ದರಪಟ್ಟಿ"** ಎಂಬುದಾಗಿ ಶೀರ್ಷಿಕೆಯನ್ನು ಬರೆದು **ದಿನಾಂಕ**: 24/09/2020 ರ ಸಂಜೆ 5-00 ರೊಳಗೆ ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು, ಇವರ ಹೆಸರಿಗೆ ಖುದ್ದಾಗಿ / ಅಂಚೆ ಮೂಲಕ ಸಲ್ಲಿಸುವುದು, ಅಂಚೆ ವಿಳಂಬಕ್ಕೆ ವಿ.ವಿ.ಯು ಜವಾಬ್ದಾರಿಯಾಗುವುದಿಲ್ಲ.

**ಆದೇಶದ ಮೇರೆಗೆ**

**ಕುಲಸಚಿವ**

ಪ್ರತಿಗಳು:-

1. ಮಾನ್ಯ ಕುಲಪತಿಗಳ ವಿಶೇಷಕರ್ತವ್ಯಾಧಿಕಾರಿಗಳು, ಕರಾಮುವಿ, ಮುಕ್ತಗಂಗೋತ್ರಿ
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮುಕ್ತಗಂಗೋತ್ರಿ
3. ಹಣಕಾಸು ಅಧಿಕಾರಿಗಳು, ಕರಾಮುವಿ, ಮುಕ್ತಗಂಗೋತ್ರಿ
4. ನಿರ್ದೇಶಕರು ಐ.ಟಿ ವಿಭಾಗ ವಿ.ವಿ ಅಂತರ್ಜಾಲದಲ್ಲಿ ಪ್ರಕಟಿಸಲು ಮಾಹಿತಿಗಾಗಿ
5. ಕಚೇರಿ ಪ್ರತಿ.



Scanned with CamScanner